ಈ. ಉದ್ಭವಿಸುವುದಿಲ್ಲ.

ಕೆಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡುವ ಬಗ್ಗೆ

591 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡಲು ಸರ್ಕಾರವು ಪರಿಗಣಿಸುವುದೇ?*

ಆ) *ರಾಜ್ಯದಲ್ಲಿ ಕೂಲಿಗಾರರ ಸಹಕಾರ ಸಂಘಗಳಿರುವುದು ವಾಸ್ತವಾಂಶವಲ್ಲವೇ?*

ಇ) *ಅವುಗಳು ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಂಡಾಗ ಸ್ಥಳೀಯ ಕಾರ್ಮಿಕರು ಉದ್ಯೋಗಾವಕಾಶ ಪಡೆಯುವರು.

ಆ) ಹೌದು.

ಇ) ಸಮರ್ಥ ನಾಯಕತ್ವದ ಅಭಾವ, ಅಸಮರ್ಥ ನಿರ್ವಹಣೆ ಮತ್ತು ಸದಸ್ಯರಲ್ಲಿ ಆಂತರಿಕ ಬಿಕ್ಕಟ್ಟು ಇತ್ಯಾದಿ.

ಮೂರ್ತೆದಾರರ ಸೊಸೈಟಿಗಳ ಸಂಖ್ಯೆ

553 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೂರ್ತೆದಾರರ ಸೊಸೈಟಿಗಳಿವೆ?*

ಆ) *ಇನ್ನೆಷ್ಟು ಸಹಕಾರಿ ಸಂಘಗಳು ನೋಂದಾವಣಿಗೆ ಅರ್ಜಿ ಸಲ್ಲಿಸಿವೆ?*

ಇ) *ಅವುಗಳನ್ನು ಯಾವಾಗ ಮಾಡಲಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) 35

ಆ) 19

ಇ) ಆಬಕಾರಿ ಇಲಾಖೆಯಿಂದ ಅನುಮತಿ ದೊರೆತ ತಕ್ಷಣ.

ರೈತರು ಪಡೆದು ಕೊಂಡಿರುವ ಸಹಕಾರಿ ಸಾಲದ ಮೇಲಿನ ಬಡ್ಡಿ ಮನ್ನಾ

557 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ವಿವಿಧ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಪಡೆದುಕೊಂಡಿರುವ ಸಾಲದ ಮೊತ್ತವೆಷ್ಟು?*

ಆ) *ಎಷ್ಟು ವರ್ಷಗಳಿಂದ ಈ ಸಾಲದ ಮರುಪಾವತಿಯಾಗಿಲ್ಲ ಹಾಗೂ ಇದಕ್ಕೆ ಸೇರಿರುವ ಬಡ್ಡಿಯ ಮೊತ್ತವೆಷ್ಟು?*

ಇ) *ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ರೈತರು ಅತಿವೃಷ್ಟಿ ಅನಾವೃಷ್ಟಿ ಹಾಗೂ ಭೂಕಂಪದಂತಹ ನೈಸರ್ಗಿಕ ದುರಂತಗಳನ್ನು ಎದುರಿಸುತ್ತಿರುವುದರಿಂದ ಸರ್ಕಾರವು ಕಡೇ ಪಕ್ಷ ಸಹಕಾರಿ ಸಾಲದ ಮೇಲೆ ಬಡ್ಡಿಯನ್ನಾದರೂ ಮನ್ನಾಮಾಡುವುದೇ?*

ಈ) *ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಕಳೆದ ಮೂರು ವರ್ಷಗಳಲ್ಲಿ ಪಡೆದ ಸಾಲದ ವಿವರ:

(ರೂ. ಲಕ್ಷಗಳಲ್ಲಿ)

	ವರ್ಷಗಳು		
ಸಾಲದ ವಿವರ	1990-91	1991-92	1992-93
1. ಅಲ್ಪಾವಧಿ	9678.87	8993.21	21105.00
2. ಮಧ್ಯಮಾವಧಿ	863.37	760.03	918.00
3. ಮಧ್ಯಮಾವಧಿ ಪರಿವರ್ತಿತ	159.58	36.53	849.60
4. ದೀರ್ಘಾವಧಿ	7216.54	9721.30	12056.95
ಒಟ್ಟು	17918.36	19511.07	34929.55

ಆ) ದಿನಾಂಕ 30-6-1993ಕ್ಕೆ 350.91 ಕೋಟಿ ರೂ.ಗಳ ಸಾಲ ಮರುಪಾವತಿಯಾಗಿಲ್ಲ. ವರ್ಷವಾರು ವಿವರಗಳು ಕೆಳಕಂಡಂತೆ ಇವೆ.

(ಕೋಟಿ ರೂ.ಗಳಲ್ಲಿ)

ಒಂದು ವರ್ಷದ ಒಳಗೆ	102.54
ಒಂದರಿಂದ ಮೂರು ವರ್ಷ	132.83
3 ವರ್ಷದಿಂದ ಮೇಲ್ಪಟ್ಟು	115.54
ಒಟ್ಟು	350.91

ಮರುಪಾವತಿಯಾಗಿಲ್ಲವಾದ ಸಾಲದಲ್ಲಿ ಸೇರಿರುವ ಬಡ್ಡಿ 147.14ಕೋಟಿ ರೂ.ಗಳಷ್ಟು ಇರುತ್ತದೆ.

ಇ) ಇಲ್ಲ.

ಈ) ರೈತರು ಹಾಗೂ ಸಹಕಾರ ಸಂಘಗಳ ಹಿತದೃಷ್ಟಿಯಿಂದ ಬಡ್ಡಿ ಮನ್ನಾ ಮಾಡಿರುವುದಿಲ್ಲ.

ಮೂಲ್ಕಿ ಸೊಸೈಟಿಯಲ್ಲಿ ಚಿನ್ನಾಭರಣದ ಕಳುವು

561 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಸಂಘದಲ್ಲಿ ಅಡವಿಟ್ಟ ಚಿನ್ನಾಭರಣ ಎಷ್ಟು ಮೌಲ್ಯದ್ದು ಕಳುವಾಗಿದೆ?

ಆ) ಇನ್ಶೂರೆನ್ಸಿನಿಂದ ಎಷ್ಟು ಪರಿಹಾರ ಸಿಕ್ಕಿದೆ?

ಇ) ಈ ಸೊಸೈಟಿಯ ಆರ್ಥಿಕ ಕಷ್ಟದಿಂದಾಗಿ ಈಗ ನಡೆಸಲಿಕ್ಕಾಗದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸೊಸೈಟಿಯ ಪುನಃ ಯೋಗ್ಯ ರೀತಿಯಲ್ಲಿ ವ್ಯವಹಾರ ನಡೆಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 22,64,062-00

ಆ) ರೂ. 6,42,870-00